# ‘ಶ್ರೀರಾಮಕೃಷ್ಣ ವಚನವೇದ’ ಭಾವಧಾರೆ - 47

ಸ್ವಾಮಿ ನಿತ್ಯಸ್ಥಾನಂದ



## ಮಾನವೀಯ ಸಂಬಂಧ

ಶ್ರೀರಾಮಕೃಷ್ಣರು ಹೇಳುತ್ತಾರೆ, ನಾವು ಭಗವಂತನೊಡನೆ ಸಂಬಂಧವನ್ನು ಬೆಳೆಸಿಕೊಳ್ಳಬೇಕು ಎಂಬುದಾಗಿ. ನಮ್ಮ ಸಂಬಂಧ ಸಾಮಾನ್ಯವಾಗಿ ಜಡವಸ್ತುಗಳೊಡನೆ, ಯಂತ್ರದೊಡನೆ. ಮೊಬೈಲ್ ಮುಂತಾದ ಅತ್ಯಾಧುನಿಕ ಯಂತ್ರಗಳನ್ನು ಅತಿಯಾಗಿ ಬಳಸುತ್ತ ನಮ್ಮ ಜೀವನವೂ ಯಾಂತ್ರಿಕವಾಗುತ್ತದೆ; ಮಾನವೀಯತೆಯನ್ನು ಕಳೆದುಕೊಳ್ಳುತ್ತೇವೆ; ಮಾನವ ಸಂಬಂಧಗಳಿಂದ ದೂರ ಸರಿಯುತ್ತೇವೆ. ಇತ್ತೀಚೆಗೆ ತೋರಿಬರುತ್ತಿರುವ ಅನೇಕ ಮಾನಸಿಕ ಕಾಯಿಲೆಗಳಿಗೆ ಮಾನವ ಸಂಬಂಧಗಳ ಕೊರತೆಯೇ ಕಾರಣ. ಜೋನಾಥಾನ್ ಹೈಡ್ಟ್ ( Jonathan Haidt) ಎಂಬುವವರು ಹೇಳುತ್ತಾರೆ: ‘‘ದೃಢವಾದ ಸಾಮಾಜಿಕ ಸಂಬಂಧವನ್ನು ಹೊಂದಿದ್ದರೆ, ಅದು ಇಮ್ಯೂನ್ ಸಿಸ್ಟಮ್ (ರೋಗ ನಿವಾರಕ ಶಕ್ತಿ) ಅನ್ನು ಬಲಪಡಿಸುತ್ತದೆ, ಜೀವಿತಾವಧಿಯನ್ನು ವೃದ್ಧಿಗೊಳಿಸುತ್ತದೆ, ಶಸ್ತ್ರಚಿಕಿತ್ಸೆಯ ನಂತರ ರೋಗವು ಬೇಗ ವಾಸಿಯಾಗುತ್ತದೆ, ಮತ್ತು ದುಗುಡತೆ (depression) ಹಾಗೂ ಆತಂಕಗಳ (anxiety) ದುಷ್ಪರಿಣಾಮಗಳನ್ನು ಸ್ಥಗಿತಗೊಳಿಸುತ್ತದೆ.’’ *(The Happiness Hypothesis, ಪು. ೧೩೩).* ಮಾನಸಿಕ ರೋಗಿಗಳಿಗೆ ಅತ್ಯುತ್ತಮವಾದ ಔಷಧಿಯೇ ಉತ್ತಮ ಮಾನವ ಸಂಬಂಧ ಎಂದು ಹೇಳಲಾಗಿದೆ.

**ಒಂದು ಸ್ವಾರಸ್ಯಕರವಾದ ಕಥೆ:** ಒಂದು ಆಶ್ರಮ, ಅಲ್ಲಿ ಅನೇಕ ಸಂನ್ಯಾಸಿಗಳಿದ್ದರು. ಆದರೆ ಅವರಲ್ಲಿ ಯಾರಿಗೂ ಒಬ್ಬರನ್ನು ಕಂಡರೆ ಒಬ್ಬರಿಗೆ ಆಗುತ್ತಿರಲಿಲ್ಲ. ಹೀಗಾಗಿ ಅಲ್ಲಿ ಉತ್ತಮ ವಾತಾವರಣವಿರಲಿಲ್ಲ. ಭಕ್ತರೂ ಅಷ್ಟಾಗಿ ಬರುತ್ತಿರಲಿಲ್ಲ. ಆಶ್ರಮದ ಮುಖ್ಯಸ್ಥರಿಗೆ ಇದೊಂದು ದೊಡ್ಡ ಚಿಂತೆ. ಅವರು ದೂರದಲ್ಲಿ ಇದ್ದ ಓರ್ವ ಅನುಭಾವಿ ಸಾಧುಗಳ ಬಳಿಗೆ ಹೋಗಿ ತಮ್ಮ ಸಮಸ್ಯೆಗೆ ಪರಿಹಾರವನ್ನು ಕೇಳಿದರು. ಅವರು ‘‘ನಿಮ್ಮ ಆಶ್ರಮದಲ್ಲಿ ಅವತಾರ ಪುರುಷರಿದ್ದಾರೆ’’ ಎಂದಷ್ಟೇ ಹೇಳಿ ಆಶ್ರಮದ ಮುಖ್ಯಸ್ಥರನ್ನು ಕಳಿಸಿಕೊಟ್ಟರು. ಅವರು ಹಿಂತಿರುಗಿ ಬಂದು, ಸಾಧುಗಳು ಹೇಳಿದ ಮಾತನ್ನು ಎಲ್ಲರಿಗೂ ಸಾರಿದರು. ಅವತಾರ ಪುರುಷನು ಯಾರು ಎಂದು ಹೇಳದೇ ಇದ್ದದ್ದರಿಂದ, ಪ್ರತಿಯೊಬ್ಬರೂ ಇವನಿರಬಹುದು, ಅವನಿರಬಹುದು ಎಂದು ಭಾವಿಸಿ, ಎಲ್ಲರೂ ಪರಸ್ಪರ ಪ್ರೀತಿಗೌರವದಿಂದ ವರ್ತಿಸತೊಡಗಿದರು. ಅನಂತರ ಆಶ್ರಮದಲ್ಲಿ ಕ್ರಮೇಣ ಉತ್ತಮ ವಾತಾವರಣ ನಿರ್ಮಾಣವಾಯಿತು, ಭಕ್ತರೂ ಹೆಚ್ಚಿನ ಸಂಖ್ಯೆಯಲ್ಲಿ ಬರತೊಡಗಿದರು.

ಶ್ರೀರಾಮಕೃಷ್ಣರು ಹೇಳುವಂತೆ ನಾವು ಭಗವಂತನೊಡನೆ ಸಂಬಂಧವನ್ನು ಬೆಳೆಸಿಕೊಂಡರೆ, ಬೇರೆ ಎಲ್ಲ ಸಂಬಂಧಗಳು ಉತ್ತಮವೂ ಅರ್ಥಪೂರ್ಣವೂ ಆಗುತ್ತವೆ. ಕಾಡಿನಲ್ಲಿ ಒಂದು ವೃಕ್ಷವು ಇತರ ವೃಕ್ಷಗಳೊಡನೆ ಸಂಬಂಧವನ್ನು ಹೊಂದಿರುತ್ತದೆ, ಭೂಮಿಯ ಮೂಲಕ. ಹಾಗೆಯೇ ಇತರರೊಡನೆ ನಮ್ಮ ಸಂಬಂಧವು ಭಗವಂತನ ಮೂಲಕವಾಗಿರಬೇಕು.

## ಪಾಪ-ಪಕ್ಷಿಗಳು

‘‘ನಾವು ಪಾಪಿಗಳು, ನಮಗೇನು ಗತಿ’’? ಎಂಬ ಪ್ರಶ್ನೆಗೆ ಶ್ರೀರಾಮಕೃಷ್ಣರ ಉತ್ತರ: ‘‘ಭಗವಂತನ ನಾಮಗುಣಕೀರ್ತನೆ ಮಾಡಿದ್ದೇ ಆದರೆ ದೇಹಕ್ಕೆ ಸಂಬಂಧಪಟ್ಟ ಪಾಪಗಳೆಲ್ಲ ಕಾಲಿಗೆ ಬುದ್ಧಿ ಹೇಳುತ್ತವೆ. ದೇಹವೆಂಬ ವೃಕ್ಷದಲ್ಲಿ ಪಾಪವೆಂಬ ಹಕ್ಕಿಗಳು



WIDEWALLPAPERS.NET

ಕುಳಿತುಕೊಳ್ಳುತ್ತವೆ. ಭಗವಂತನ ನಾಮಗುಣಕೀರ್ತನೆ ಮಾಡುವುದೇ ಕೈ ಚಪ್ಪಾಳೆ ಹೊಡೆದ ಹಾಗೆ. ಕೈಚಪ್ಪಾಳೆ ಹಾಕಿದೊಡನೆಯೇ ಮರದಿಂದ ಎಲ್ಲ ಹಕ್ಕಿಗಳು ಓಡಿಹೋಗುವ ಹಾಗೆ, ಭಗವಂತನ ನಾಮಗುಣಕೀರ್ತನೆ ಮಾಡಿದೊಡನೆಯೇ ಎಲ್ಲ ಪಾಪಗಳೂ ಕಂಬಿ ಕೀಳುತ್ತವೆ.'' *(ಶ್ರೀರಾಮಕೃಷ್ಣ ವಚನವೇದ, ಭಾಗ ೧, ಪು.೧೪೩)*

**ದೇಹವೆಂಬ ವೃಕ್ಷ:** ದೇಹೇಂದ್ರಿಯ ಮನಸ್ಸುಗಳಿಂದ ಕೂಡಿದ ವ್ಯಕ್ತಿತ್ವ. ಈ ವೃಕ್ಷದ ಬೇರು ಆನುವಂಶಿಕ ಮತ್ತು ಪೂರ್ವಜನ್ಮದ ಸಂಸ್ಕಾರಗಳು. ನಮ್ಮ ದಿನನಿತ್ಯದ ಮಾತು, ಕೃತಿ, ಆಲೋಚನೆಗಳ ಮೂಲಕ ಸಂಗ್ರಹವಾದ ಪಾಪಪುಣ್ಯಗಳೇ ಹಕ್ಕಿಗಳು. ಅಸಂಗದ ಶಸ್ತ್ರದಿಂದ ಈ ವೃಕ್ಷದ ಬೇರನ್ನು ಕತ್ತರಿಸಬೇಕು. **(ಅಸಂಗಶಸ್ತ್ರೇನ ದೃಢೇನ ಛಿತ್ವಾ** - *ಭಗವದ್ಗೀತೆ, ೧೫.೩)* ವ್ಯವಹಾರದಲ್ಲಿ ತೊಡಗಿದಾಗ ಮತ್ತೆ ಹಕ್ಕಿಗಳು ಬರಬಹುದು. ಹಕ್ಕಿಗಳನ್ನು ಹೊಡೆಯುವುದಕ್ಕೆ ಜಪ, ಪ್ರಾರ್ಥನಾದಿ ಕಲ್ಲುಗಳನ್ನು ಇಟ್ಟುಕೊಂಡಿರಬೇಕು. ಶ್ರೀರಾಮಕೃಷ್ಣರು ಕೊಡುವ ಕೈಚಪ್ಪಾಳೆ ಹೆಚ್ಚು ಸೂಕ್ತವಾಗಿದೆ. ಕಲ್ಲು ಯಾವಾಗಲೂ ಸಿಗದೆ ಇರಬಹುದು. ಆದರೆ ಕೈಗಳು ಯಾವಾಗಲೂ ನಮ್ಮೊಡನೆಯೇ ಇರುತ್ತವೆ. ಅಂದರೆ ನಾಮಗುಣಕೀರ್ತನೆ ಯಾವಾಗಲೂ ಎಲ್ಲರಿಗೂ ಸಾಧ್ಯ. ವ್ಯವಹಾರ ಸಂದರ್ಭದಲ್ಲಿಯೂ ನಾವು ಎಚ್ಚರಿಕೆಯಿಂದಿದ್ದರೆ, ನಾನೊರ್ವ ಆಧ್ಯಾತ್ಮಿಕ ವ್ಯಕ್ತಿ ಎಂಬ ಅರಿವು ಗಟ್ಟಿಯಾಗಿದ್ದರೆ ಹಕ್ಕಿಗಳಿಗೆ ಅವಕಾಶವಿರುವುದಿಲ್ಲ. 'ನಾನು ಪಾಪಿ' ಎಂದು ಭಾವಿಸುವುದಕ್ಕಿಂತ 'ನಾನು ಆಧ್ಯಾತ್ಮಿಕ ವ್ಯಕ್ತಿ' ಎಂದು ಭಾವಿಸುವುದು ಎಷ್ಟೋ ಮೇಲು. ನಮ್ಮ ಬಗೆಗಿನ ನಮ್ಮ ಭಾವನೆಯಂತೆಯೇ ನಮ್ಮ ವರ್ತನೆಯೂ ಇರುತ್ತದೆ, ಎಂಬುದನ್ನು ಮರೆಯಬಾರದು. ತಾನು ಪಾಪಿ ಎನ್ನುತ್ತಿದ್ದರೆ ಅವನು ಪಾಪಿಯೇ ಆಗುತ್ತಾನೆ, ಎಂಬುದು ಶ್ರೀರಾಮಕೃಷ್ಣರ ಅಭಿಪ್ರಾಯ.

**ಪಾಪ-ಪುಷ್ಕರಿಣಿ**

**ಶ್ರೀರಾಮಕೃಷ್ಣರು :** ''ಮತ್ತೆ ನೋಡು, ಹುಲ್ಲುಗಾವಲಿನಲ್ಲಿ ತೆಗೆದಿರುವ ಕುಂಟೆಯ ನೀರು ಸೂರ್ಯನ ತಾಪದಿಂದ ತನ್ನಷ್ಟಕ್ಕೆ ತಾನೇ ಇಂಗಿಹೋಗಿಬಿಡುತ್ತದೆ.

''ಹೋಗಲಿ, ಭಗವಂತನ ದರ್ಶನ ಬೇಕೆಂದು ಒಮ್ಮೆ ಯಾದರೂ ಅಳು.

''ಇವೆರಡೂ ಅದಕ್ಕೆ ಸಾಧನ : ಅಭ್ಯಾಸ ಮತ್ತು ಅನುರಾಗ, ಅಂದರೆ ಆತನ ದರ್ಶನ ಪಡೆಯಬೇಕೆಂಬ ವ್ಯಾಕುಲತೆ'' *(ಶ್ರೀರಾಮಕೃಷ್ಣ ವಚನವೇದ, ಭಾಗ ೧, ಪು.೧೪೪)*

ತಗ್ಗು ಪ್ರದೇಶದಲ್ಲಿ ನೀರು ಶೇಖರವಾಗುವುದು ಸ್ವಾಭಾವಿಕ. ಹಾಗೆಯೇ ಮನಸ್ಸಿನಲ್ಲಿ ದುಗುಡತೆ, ಖಿನ್ನತೆ (depression) ಇತ್ಯಾದಿಗಳು ಉಂಟಾದಾಗ ಕೆಟ್ಟ ಆಲೋಚನೆಗಳ ನೀರು ಶೇಖರವಾಗುತ್ತದೆ. ತಪಸ್ಸಿನ ಶಾಖಕ್ಕೆ ಅದು ಆರಿಹೋಗುತ್ತದೆ. ಆ ಹೊಂಡವನ್ನು ಆತ್ಮವಿಶ್ವಾಸದ ಮೂಲಕ ಮುಚ್ಚಿಬಿಡಬೇಕು. ದುಗುಡತೆ (depression) ಯಿದ್ದಾಗ ಪಾಪಪ್ರಜ್ಞೆಯು ಮನುಷ್ಯನನ್ನು ಕಾಡುತ್ತದೆ. ಅದನ್ನೇ ಮೆಲುಕು ಹಾಕುತ್ತ ಪಾಪ ಪುಷ್ಕರಿಣಿಯೇ ಸೃಷ್ಟಿಯಾಗುತ್ತದೆ. ಶ್ರೀರಾಮಕೃಷ್ಣರು ಹೇಳುವಂತೆ, ಭಗವಂತನ ನಾಮಗುಣಕೀರ್ತನೆಯಿಂದ ನೀರು ಇಂಗಿಹೋಗುತ್ತದೆ. ಮತ್ತೆ ನೀರು ಸೇರಿಕೊಳ್ಳದಂತೆ ನೋಡಿಕೊಳ್ಳಬೇಕು. ಆ ಹೊಂಡವನ್ನು (depression) ಆತ್ಮವಿಶ್ವಾಸದಿಂದ ಮುಚ್ಚಿಬಿಟ್ಟರೆ ಮತ್ತೆ ನೀರು ನಿಲ್ಲುವ ಸಂಭವವಿರುವುದಿಲ್ಲ.

ಇಲ್ಲಿ ಶ್ರೀರಾಮಕೃಷ್ಣರು ಅಭ್ಯಾಸ ಮತ್ತು ಅನುರಾಗಗಳನ್ನು ಪ್ರಸ್ತಾಪಿಸುತ್ತಾರೆ. ನಾಮಜಪವೇ ಮುಂತಾದ ಅಭ್ಯಾಸ ಮತ್ತು ಅನುರಾಗ — ಭಗವಂತನ ಕಡೆಗಿರುವ ಸೆಳೆತ. ಅಭ್ಯಾಸದ ಮೂಲಕ ಮನಶ್ಶಕ್ತಿ ಸಂಗ್ರಹವಾಗುತ್ತದೆ. ಅನುರಾಗದ ಮೂಲಕ ಅದನ್ನು ಭಗವಂತನೆಡೆಗೆ ಹರಿಸಬೇಕು - ನದಿಗೆ ಅಣೆಕಟ್ಟು ಕಟ್ಟಿ ನೀರನ್ನು ಬೇರೆಡೆಗೆ ಹರಿಸುವಂತೆ. ಶ್ರೀಕೃಷ್ಣನು ಭಗವದ್ಗೀತೆಯಲ್ಲಿ, ಅಭ್ಯಾಸ ಮತ್ತು ವೈರಾಗ್ಯದ ಮೂಲಕ ಮನೋನಿಗ್ರಹ ಸಾಧ್ಯ ಎಂದು ಹೇಳುತ್ತಾನೆ. ಶ್ರೀರಾಮಕೃಷ್ಣರು ಹೇಳಿದ ಸಾಧನೆಗಳೊಂದಿಗೆ ವೈರಾಗ್ಯವನ್ನೂ ಸೇರಿಸಿಕೊಳ್ಳಬೇಕು. ಅವರೇ ಹೇಳುತ್ತಾರೆ: ''ಭಗವದನುರಾಗ ಮತ್ತು ವಿಷಯೇ ವಿರಾಗ.''

ಘಂಟೆ ಅಪರಾಹ್ನ ಒಂದು. ಪರಮಹಂಸರು ಭಕ್ತರೊಡನೆ ಊಟಕ್ಕೆ ಕುಳಿತುಕೊಂಡಿದ್ದಾರೆ. ಒಬ್ಬ ಕೆಳಗಿನ ಪ್ರಾಂಗಣದಲ್ಲಿ ಹಾಡುತ್ತಿದ್ದಾನೆ:

**ಏಳು ತಾಯಿ, ಏಳು ತಾಯಿ ಎಷ್ಟು ಕಾಲ ನಿದ್ದೆಗೈವೆ**
**ಮೂಲಾಧಾರಪದ್ಮದಿ!**
**ಏಳು ತಾಯಿ, ಶಿವನಿರುವಾ ಸಾವಿರದಳಕಮಲವರಳ-**
**ಲೆನ್ನ ಶಿರೋಮಧ್ಯದಿ !**
**ಷಟ್‌ಚಕ್ರವ ಭೇದಿಸಮ್ಮ**
**ಮನದ ವ್ಯಥೆಯ ನೀಗಿಸೆಮ್ಮ**
**ಓ ಚೇತನ ರೂಪಿಣಿ !**

''ಈ ಹಾಡನ್ನು ಕೇಳಿ ಶ್ರೀರಾಮಕೃಷ್ಣರು ಸಮಾಧಿಸ್ಥರಾಗಿಬಿಟ್ಟರು. ಇಡೀ ಶರೀರ ಸ್ಥಿರವಾಗಿಬಿಟ್ಟಿದೆ. ಕೈ ಎಲೆಯ ಮೇಲೆ ಇಟ್ಟದ್ದು ಇಟ್ಟ ಹಾಗೇ ನಿಂತಿದೆ. ಊಟ ಮಾಡುವುದು ನಿಂತು ಹೋಗಿಬಿಟ್ಟಿತು...'' *(ಅಲ್ಲೇ, ಭಾಗ ೧, ಪು.೧೪೪)*

ಶ್ರೀರಾಮಕೃಷ್ಣರು ಒಣಗಿದ ಬೆಂಕಿಪೆಟ್ಟಿಗೆ ಇದ್ದ ಹಾಗೆ, ಸ್ವಲ್ಪ ಗೀರಿದರೆ ಸಾಕು ಹತ್ತಿಕೊಳ್ಳುತ್ತದೆ. ಸ್ವಲ್ಪ ಸೂಚನೆ ಸಿಕ್ಕಿದರೆ ಸಾಕು ಅವರ ಮನಸ್ಸು ಥಂಗನೆ ಸಮಾಧಿ ಸಾಗರದಲ್ಲಿ ಮುಳುಗಿಬಿಡುತ್ತಿತ್ತು. ಒಣಗಿದ ಬೆಂಕಿಪೆಟ್ಟಿಗೆ ಎಂದರೆ ಸ್ವಲ್ಪವೂ ಪ್ರಾಪಂಚಿಕತೆಯ ತೇವ ಇಲ್ಲದಿರುವ ಮನಸ್ಸು. ಸಾಮಾನ್ಯರ ಮನಸ್ಸು ಪ್ರಾಪಂಚಿಕ ತೇವಾಂಶದಿಂದ ಕೂಡಿದ ಬೆಂಕಿಪೆಟ್ಟಿಗೆ ಇದ್ದ ಹಾಗೆ - ಎಷ್ಟೇ ಗೀರಿದರೂ ಆಧ್ಯಾತ್ಮಿಕ ಉದ್ದೀಪನ ಆಗುವುದೇ ಇಲ್ಲ.

## ಭಗವತ್ಕೃಪೆ ಮತ್ತು ಸ್ವಪ್ರಯತ್ನ

**ಶ್ರೀರಾಮಕೃಷ್ಣರು:** ''ಕೃಪಾಸಿದ್ಧರು ಎಂಬ ಹೆಸರಿನ ಇನ್ನೊಂದು ಗುಂಪಿನವರಿದ್ದಾರೆ. ಅವರಿಗೆ ಇದ್ದಕಿದ್ದ ಹಾಗೆ ಭಗವಂತನ ಕೃಪೆ ದೊರೆತು ಆತನ ದರ್ಶನ ದೊರೆತು ಜ್ಞಾನ ದೊರೆತುಬಿಡುತ್ತದೆ. ಉದಾಹರಣೆಗೆ ಸಾವಿರಾರು ವರ್ಷಗಳಿಂದ ಕತ್ತಲೆ ತುಂಬಿದ್ದ ಕೋಣೆಯನ್ನು ತೆಗೆದುಕೊಳ್ಳಿ. ಅಲ್ಲಿಗೆ ಬೆಳಕು ತೆಗೆದುಕೊಂಡು ಹೋದರೆ, ಅದು ಒಡನೆಯೇ ಬೆಳಗಲಾರಂಭಿಸುತ್ತದೆ ವಿನಾ ಕಿಂಚಿತ್ ಕಿಂಚಿತ್ತಾಗಿ ಅಲ್ಲ.'' *(ಅಲ್ಲೇ, ಪು.೧೮೫)*

ಕತ್ತಲೆ ಕೋಣೆಯಲ್ಲಿ ಬೆಳಕು ತಂದರೆ ಕತ್ತಲೆ ಒಮ್ಮೆಯೇ ಹೋಗುತ್ತದೆ. ಬೆಳಕು ಇಡೀ ಕೋಣೆಯನ್ನು ವ್ಯಾಪಿಸುವುದರಿಂದ. ಹಾಗೆಯೇ ಕೃಪೆ ಇಡೀ ವ್ಯಕ್ತಿತ್ವವನ್ನು ವ್ಯಾಪಿಸುತ್ತದೆ. ಅಪ್ರಜ್ಞಾ ಮನಸ್ಸಿನಾಳವನ್ನೂ ಪ್ರವೇಶಿಸಿ ಅದನ್ನೂ ಪರಿವರ್ತಿಸುತ್ತದೆ. ಅದು ಫ್ಲಡ್‌ಲೈಟ್ ಇದ್ದಹಾಗೆ. ಬೆಳಕು ಮಂದವಾಗಿದ್ದರೆ ಕೋಣೆಯಲ್ಲಿ ಮಬ್ಬುಗತ್ತಲೆ ಇರುತ್ತದೆ. ಇದು ನಮ್ಮ ಸಾಧನೆಯ ಮೂಲಕ ಸ್ವಲ್ಪ ಸ್ವಲ್ಪವೇ ಕತ್ತಲೆಯನ್ನು ನಿವಾರಿಸುವಂತೆ. ಕೃಪೆಯ ಬೆಳಕು ಯಾವಾಗಲೂ ಬೆಳಗುತ್ತಿರುತ್ತದೆ. ನಾವು ಮನಸ್ಸಿನ ಬಾಗಿಲನ್ನು ತೆರೆಯಬೇಕಷ್ಟೆ. ನಾವು ಬಾಗಿಲನ್ನು ತೆಗೆಯುವುದನ್ನೇ ಕಾಯುತ್ತಿರುತ್ತದೆ. ನಾವು ಸ್ವಲ್ಪ ಸ್ವಲ್ಪ ತೆಗೆದರೆ ಅದು ಸ್ವಲ್ಪ ಸ್ವಲ್ಪವೇ ಪ್ರವೇಶಿಸುತ್ತದೆ. ಬಾಗಿಲನ್ನು ತೆಗೆಯುವುದೇ ಪುರುಷ ಪ್ರಯತ್ನ. ಈ ಪುರುಷಪ್ರಯತ್ನ ಮತ್ತು ಭಗವತ್ಕೃಪೆ – ಇವು ಬಂಡಿಯ ಎರಡು ಚಕ್ರಗಳಿದ್ದಂತೆ ಎಂದು ಹೇಳಲಾಗಿದೆ.

ಭಗವತ್ಕೃಪೆಯನ್ನು ಪಡೆಯಬೇಕಾದರೆ ಪುರುಷ ಪ್ರಯತ್ನ ಅತ್ಯಂತ ಆವಶ್ಯಕ. ''God help those who help them selves''(ಪ್ರಯತ್ನಶೀಲರಿಗೆ ಭಗವಂತನ ಅನುಗ್ರಹ ಉಂಟಾಗುತ್ತದೆ) ಎಂಬ ಪ್ರಸಿದ್ಧ ಹೇಳಿಕೆಯಿದೆ. ಆದರೆ ಸ್ವಾಮಿ ವಿವೇಕಾನಂದರು ಹೇಳುತ್ತಾರೆ, ''God helps those who cannot help themsleves'' ('ಸ್ವಪ್ರಯತ್ನ ಆಗದವರಿಗೆ ದೇವರೇ ಸಹಾಯಕ್ಕೆ ಬರುತ್ತಾನೆ') ಮಾಡಬೇಕಾದ ಸಾಧನೆಗಳನ್ನೆಲ್ಲ ಮಾಡಿ, ಇನ್ನೇನೂ ಮಾಡಲಾಗದ ಸಂಪೂರ್ಣ ಶರಣಾಗತಿಯ ಭಾವ ಉಂಟಾದಾಗ ಭಗವಂತನೇ ಆ ಸಾಧಕನ ಯೋಗಕ್ಷೇಮವನ್ನು ನೋಡಿಕೊಳ್ಳುತ್ತಾನೆ. *(ನೋಡಿ: ಗೀತೆ ೯.೨೨)* ಮೇಲಿನ ಎರಡು ಆಂಗ್ಲ ಹೇಳಿಕೆಗಳಲ್ಲಿ ಮೊದಲನೆಯದು ಸಾಧನೆಯ ಪ್ರಾರಂಭಿಕ ಹಂತಕ್ಕೂ, ಎರಡನೆಯದು ಸಾಧನೆಯ ತುದಿಯ ಹಂತಕ್ಕೂ ಅನ್ವಯಿಸುತ್ತವೆ.

ಸ್ವಪ್ರಯತ್ನ ಆವಶ್ಯಕ. ಆದರೆ ತಾಳ್ಮೆಯಿಂದ ಪ್ರಯತ್ನಿಸಬೇಕು, ಹಠತ್ತಾಗಿ ಏನನ್ನೂ ಸಾಧಿಸಲಾಗುವುದಿಲ್ಲ. ''ಹಸುವನ್ನು ಹುಲ್ಲು ತೋರಿಸುತ್ತ ನಿಧಾನವಾಗಿ ಕೊಟ್ಟಿಗೆಗೆ ಕರೆದುಕೊಂಡು ಹೋಗಬೇಕು. ಗದರಿಸುವುದು, ಹೊಡೆಯುವದರಿಂದ ಯದ್ವಾತದ್ವಾ ಓಡಲು ಪ್ರಾರಂಭಿಸುತ್ತದೆ.'' *(ಜೀವನ್ಮುಕ್ತಿವಿವೇಕ, ಪು.೩೪, ಶ್ರೀರಾಮಕೃಷ್ಣ ಆಶ್ರಮ, ಮೈಸೂರು.)* ಅಲ್ಲಿಯೇ ಇನ್ನೊಂದು ಶ್ಲೋಕ ಬರುತ್ತದೆ.

**ಸಮತಾ ಸಾಂತ್ವನೇನಾಶು ನ ದ್ರಾಗಿತಿ ಶನೈಃ ಶನೈಃ ।**
**ಪೌರುಷೇಣ ಪ್ರಯತ್ನೇನ ಲಾಲಯೇಚ್ಚಿತ್ತಬಾಲಕಮ್ ॥**

''ಬಾಲಕನಂತಿರುವ ಚಿತ್ತವನ್ನು (ಅದರಲ್ಲಿ) ಸಮತ್ವವನ್ನು ಉಂಟುಮಾಡುವುದರ ಮೂಲಕವೂ ಸಮಾಧಾನಪಡಿಸುವುದರ ಮೂಲಕವೂ ಮೆಲ್ಲಮೆಲ್ಲಗೆ ವಶಪಡಿಸಿಕೊಳ್ಳಬಹುದು, ಹಠಾತ್ತನೆ ವಶಪಡಿಸಿಕೊಳ್ಳಲಾಗುವುದಿಲ್ಲ.'' ವೇಗವಾಗಿ ಓಡುತ್ತಿರುವ ಗಾಡಿಗೆ ಒಮ್ಮೆಯೇ ಬ್ರೇಕ್ ಹಾಕಿದರೆ ಏನಾಗುತ್ತದೆ?

**ಶ್ರೀರಾಮಕೃಷ್ಣರು:** ''ನಿಮ್ಮ ತತ್ತ್ವಶಾಸ್ತ್ರ ಕೇವಲ ಊಹಾಪೋಹದಿಂದ ತುಂಬಿದೆ. ಕೇವಲ ವಿಚಾರದಲ್ಲೇ ತೊಡಗಿರುತ್ತದೆ. ಹಾಗೆ ಮಾಡುವುದರಿಂದ ಭಗವಂತನ ಸಾಕ್ಷಾತ್ಕಾರವನ್ನು ಪಡೆಯಲಾಗುವುದಿಲ್ಲ.''

*(ಮುಂದುವರಿಯುವುದು)*

## ಶ್ರೀರಾಮಕೃಷ್ಣ ಅವತಾರದ ವೈಶಿಷ್ಟ್ಯ

ಪ್ರತಿಯೊಬ್ಬ ಅವತಾರಪುರುಷನೂ ಒಂದೊಂದು ಆದರ್ಶವನ್ನು ಪ್ರತಿನಿಧಿಸುತ್ತಾನೆ. ಉಳಿದ ಆದರ್ಶಗಳು ಅವನಲ್ಲಿ ಇಲ್ಲ ಎಂದಲ್ಲ. ಅವನು ಎಲ್ಲ ಆದರ್ಶಗಳ ಮೂರ್ತರೂಪ. ಆದರೆ ಯುಗಧರ್ಮಕ್ಕೆ ತಕ್ಕಂತೆ, ಸಮಾಜದ ಆವಶ್ಯಕತೆಗೆ ತಕ್ಕಂತೆ ಒಂದು ಆದರ್ಶಕ್ಕೆ ವಿಶೇಷ ಅಭಿವ್ಯಕ್ತಿಯನ್ನು ನೀಡಿರುತ್ತಾನೆ. ಚೈತನ್ಯದೇವ ಪ್ರೇಮವನ್ನು, ಶಂಕರರು ಜ್ಞಾನವನ್ನು, ಬುದ್ಧನು ವೈರಾಗ್ಯವನ್ನು, ಹಾಗೂ ಕೃಷ್ಣನು ನಿಷ್ಕಾಮ ಕರ್ಮಯೋಗವನ್ನು ಪ್ರತಿನಿಧಿಸುತ್ತಾರೆ. ಅವನು ಸರ್ವಧರ್ಮ, ಸರ್ವತತ್ತ್ವಗಳ ಸಮನ್ವಯ ಪುರುಷ. ಕರ್ಮ, ಜ್ಞಾನ, ಭಕ್ತಿ ಎಲ್ಲವೂ ಮಹಾ ಸಾಧನೆಯ ಅಂಗಗಳೆಂದು ಅವನು ತೋರಿಸಿಕೊಟ್ಟನು. ಅದಕ್ಕೆ ಸಾಕ್ಷಿಯಾಗಿ ನಿಷ್ಕಾಮಕರ್ಮವನ್ನು ಬದುಕಿ ತೋರಿಸಿದನು. ನಿಃಸ್ವಾರ್ಥ ಕರ್ಮದಿಂದ ಹೃದಯಶುದ್ಧಿ; ಶುದ್ಧ ಹೃದಯದಲ್ಲಿ ತ್ಯಾಗಬುದ್ಧಿ ಬರುತ್ತದೆ. ಬುದ್ಧ ಈ ತ್ಯಾಗದೊಡನೆ ಅವತರಿಸಿದನು. ಅವನು ತನಗಾಗಿ ಏನೂ ಮಾಡಲಿಲ್ಲ. ತನ್ನ ಮೋಕ್ಷಕ್ಕಾಗಿಯೂ ಏನನ್ನೂ ಮಾಡಲಿಲ್ಲ. ಅವನು ಪ್ರತಿಯೊಂದನ್ನೂ ಮಾಡಿರುವುದು ಆರ್ತ, ದುಃಖಿತ ಮಾನವತೆಗಾಗಿ, ಬಹುಜನರ ಹಿತಕ್ಕಾಗಿ. ತ್ಯಾಗದಿಂದ ಜ್ಞಾನ ಉದಿಸುತ್ತದೆ. ಶಂಕರರು ಈ ಜ್ಞಾನವನ್ನು ಧರಿಸಿ ಬಂದರು. ಜ್ಞಾನದಿಂದ ಪ್ರೇಮ ಉಂಟಾಗುತ್ತದೆ. ಚೈತನ್ಯ ಈ ಪ್ರೇಮವನ್ನು ಎಲ್ಲರಿಗೂ ಹಂಚಲೆಂದು ಬಂದನು. ಜನ ಈ ಎಲ್ಲಾ ಮಾರ್ಗಗಳು ಪರಸ್ಪರ ವಿರುದ್ಧ ಎಂದು ಭಾವಿಸಿದರು. ಈ ಯುಗದಲ್ಲಿ ಶ್ರೀರಾಮಕೃಷ್ಣರು ಈ ಭೇದಭಾವಗಳನ್ನು ತೊಡೆದುಹಾಕಿ ಸರ್ವಧರ್ಮ ಸಮನ್ವಯವನ್ನು ಬದುಕಿ ತೋರಿಸಿದರು.

— ಸ್ವಾಮಿ ಪ್ರೇಮಾನಂದ *('ಶ್ರೀರಾಮಕೃಷ್ಣ ಭಾವಸಂಗಮ', ಪು.೧೭೯)*



WIDEWALLPAPERS.NET